ಅ) ಹಳೆ ಗ್ರಾಮದಲ್ಲಿ ವಾಸಿಸುವ ಕುಟುಂಬಗಳನ್ನು ಸ್ಥಳಾಂತರಿಸಿದರೆ ಅವರಿಗೆ ಒಳ್ಳೆಯ ವಸತಿ ಸೌಕರ್ಯ ಒದಗುವುದರಿಂದ ಸರ್ಕಾರದವರು ಈ ಬಗ್ಗೆ ಕ್ರಮ ತೆಗೆದುಕೊಳ್ಳುವರೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಜೌಗು ಆಗಿರುವ ಗ್ರಾಮಗಳನ್ನು ಸ್ಥಳಾಂತರಿಸಲು ಒಂದು ಸಮಿತಿಯನ್ನು ಸರ್ಕಾರ ನೇಮಿಸಿದೆ. ಅವರು ಈ ಗ್ರಾಮವನ್ನು ಪರಿಶೀಲಿಸಿದ ನಂತರ ಅವರ ಶಿಫಾರಸ್ಸಿನ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಗಂಗಾವತಿ ತಾಲ್ಲೂಕಿನಲ್ಲಿ ವಿತ ನೀರಾವರಿ ಯೋಜನೆ ಬಗೆ

೧೪೧೦ ಶ್ರೀ ಶ್ರೀರಂಗದೇವರಾಯಲು (ಕನಕಗಿರಿ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಗಂಗಾವತಿ ತಾಲ್ಲೂಕಿನ ಕುಂಟೋಜ ಮತ್ತು ಎಳೆಯನೂರು ಗ್ರಾಮಗಳ ವಿತ ನೀರಾವರಿ ಯೋಜನೆಗಳು ೧೯೮೩–೮೪ನೇ ಸಾಲಿನಲ್ಲಿ ಪುಂಜೂರಾಗಿದ್ದು ನಿಜವಲ್ಲವೇ,

ಆ) ಹಾಗಿದ್ದಲ್ಲಿ, ಈವರೆಗೂ ಕಾಮಗಾರಿಗಳನ್ನು ಪ್ರಾರಂಭಿಸದಿರುವುದಕ್ಕೆ ಕಾರಣಗಳೇನು?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು).–

ಅ) ನಿಜ ಸಹಕಾರ ಸಂಘದ ಮತಿಯಿಂದ ಮಂಜೂರಾಗಿವೆ.

ಆ) ಪೂರ್ವಭಾವಿ ಕೆಲಸಗಳು ಪ್ರಗತಿಯಾಗಿದ್ದು, ಎರಡೂ ಸಹಕಾರ ಸಂಘಗಳ ನಡವಳಿಯ ಪ್ರಕಾರ ನೀರಾವರಿ ಇಲಾಖೆಗೆ ೧೯೮೫ನೇ ಸವೆಂಬರ್ ಮಾಹೆಯಲ್ಲಿ ಉಳಿದ ಕೆಲಸಗಳು ನಿರ್ವಹಿಸಲ್ಪಟ್ಟದೆ ಟೆಂಡರ್ ಕರೆಯುವ ಉದ್ದೇಶವಿದೆ.

ಕಬನಿ ಜಲಾಶಯದ ಎರಡನೇ ಹಂತದ ಬಗ್ಗೆ

೧೫೫೭ ಡಿ.ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಬನಿ ಜಲಾಶಯದ ಎರಡನೇ ಹಂತದ ಯೋಜನೆಯನ್ನು ಸರ್ಕಾರದವರು ಕೈಕೊಂಡಿರುವರೆ

ಆ) ಹಾಗಿದ್ದಲ್ಲಿ ಸದರಿ ಯೋಜನೆಯ ಅಂದಾಜು ವೆಚ್ಚವೆಷ್ಟು?

ಇ) ಸದರಿ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಈ) ಹಾಗಿಲ್ಲದಿದ್ದಲ್ಲಿ ಅದನ್ನು ಕೂಡಲೇ ಕೈಗೊಳ್ಳಲು ಇರುವ ತೊಂದರೆಗಳೇನು?

ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಇಂದ (ಈ) ವರೆಗೆ

ಕಬನಿ ಎರಡನೇ ಹಂತ ಎಂಬ ಯೋಜನೆ ಇಲ್ಲ.

ವಿತ ನೀರಾವರಿ ಸಹ ಸೇರಿ ಕಬನಿ ಯೋಜನೆಯ ಅಂದಾಜು (ರೂ. ೩೯೦ ಕೋಟಿ) ಸರ್ಕಾರದ ಪರಿಶೀಲನೆಯಲ್ಲಿದೆ.